# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶೆಟ್ಟಿಹಳ್ಳಿ ಉಪವಿಭಾಗ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಹತ್ತಿರ, ರವೀಂದ್ರನಗರ, ಶೆಟ್ಟಿಹಳ್ಳಿ ಕ್ರಾಸ್,

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯದ ವಾರ್ಡ್ ಸಂಖ್ಯೆ 12 ರಲ್ಲಿ ದಿನಾಂಕ:- 23.08.2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ ರವಿಕುಮಾರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಕೃಷ್ಣಮೂರ್ತಿ ಎಸ್.ಎನ್, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು.
3. ಶ್ರೀ ನಾಗಭೂಷಣ್, ಮಾಜಿ ಬಿಬಿಎಂಪಿ ಸದಸ್ಯರು, ವಾರ್ಡ್ ನಂ.12 ಶೆಟ್ಟಿಹಳ್ಳಿ.
4. ಶ್ರೀ ದೇವೇಗೌಡ್ರು, ಸದಸ್ಯರು, ವಾರ್ಡ್ ನಂ.12.
5. ಶ್ರೀ ಕೆಂಪೋಬಳಯ್ಯ, ಸದಸ್ಯರು, ವಾರ್ಡ್ ನಂ.12.
6. ಶ್ರೀಮತಿ ನಾಗವೇಣಿ, ಸದಸ್ಯರು, ವಾರ್ಡ್ ನಂ.12.
7. ಶ್ರೀ ಮಂಜುನಾಥ್‌ಗೌಡ, ಪಶುಪಾಲನಾ ಇಲಾಖೆ, ವಾರ್ಡ್ ನಂ.12.
8. ಶ್ರೀ ಮಂಜುನಾಥ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.12.
9. ಶ್ರೀ ಶಿವಾನಂದ್, ಸ.ಅ, ಬೆಸ್ಕಾಂ, ಶೆಟ್ಟಿಹಳ್ಳಿ.
10. ಶ್ರೀ ಜಗದೀಶ್, ಪಿ.ಎಸ್.ಐ, ಜಾಲಹಳ್ಳಿ ಪೋಲೀಸ್ ಠಾಣೆ.
11. ಶ್ರೀ ಸಿದ್ದರೆಡ್ಡಿ ಕೆ.ಎ, ಕಿರಿಯ ಆರೋಗ್ಯ ನಿರೀಕ್ಷಕರು, ಪಿ.ಹೆಚ್.ಸಿ, ಅಬ್ಬಿಗೆರೆ.
12. ಶ್ರೀ ಚಂದ್ರಮೋಹನ್, ವಾಟರ್‌ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ.
13. ಶ್ರೀ ಸುರೇಶ್, ಕಿ.ಆ.ಪ, ವಾರ್ಡ್ ನಂ.12.
14. ಶ್ರೀ ಜೆ. ಸಾಗರ್, ಅಸೆಸ್ಸರ್, ವಾರ್ಡ್ ನಂ.12.
15. ಶ್ರೀ ಸಂಜೀವಪ್ಪ, ಅರಣ್ಯ ಇಲಾಖೆ, ದಾಸರಹಳ್ಳಿ ವಲಯ..
16. ಶ್ರೀ ಗಣೇಶ್ ಟಿ, ಬಿಬಿಎಂಪಿ ಮಾರ್ಷಲ್.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

1) ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಿರುವುದು.

Scanned by CamScanner

| ಕ್ರ ಸಂ | ವಿಷಯ ಸೂಚಿ | ಚರ್ಚಿಸಿದ ವ್ಯಕ್ತಿಯ ಹೆಸರು ಮತ್ತು ದೂರವಾಣಿ ಸಂಖ್ಯೆ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|---|
| 1 | ದೇವೇಂದ್ರಪ್ಪ ರವರು ಸುಮಾರು ದಿನಗಳಿಂದ 8ನೇ ಎ ಅಡ್ಡರಸ್ತೆ, ಕಮ್ಮಗೊಂಡನಹಳ್ಳಿ ರಸ್ತೆಯಲ್ಲಿ ಕುಡಿಯುವ ನೀರು ಬರುತ್ತಿಲ್ಲವೆಂದು ದೂರು ನೀಡಿದರು. | ಶ್ರೀ ದೇವೇಂದ್ರಪ್ಪ | ಈ ತೊಂದರೆಗಳಿಗೆ ಸಂಬಂಧಿಸಿದಂತೆ ಶ್ರೀ ಚಂದ್ರಮೋಹನ್‌ರವರನ್ನು ವಿಚಾರಿಸಲಾಗಿ ಈ ರಸ್ತೆ ಮತ್ತು ಹೊಂದಿಕೊಂಡಂತೆ Contamination ಆಗಿರುವುದಾಗಿ ಸರಿಪಡಿಸಿಕೊಂಡು ನೀರು ಬಿಡುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 2 | ಮೇಲೆ ತಿಳಿಸಿರುವ ತೊಂದರೆಗಳಿಗೆ ಸಂಬಂಧಿಸಿದಂತೆ ವಾಟರ್‌ಮ್ಯಾನ್‌ಗಳನ್ನು ಮೂರು ತಿಂಗಳಿಗೆ ಒಂದು ಬಾರಿ ಬದಲಾಯಿಸಬೇಕೆಂದು ಕೇಶವಮೂರ್ತಿ ರವರು ತಿಳಿಸಿದರು | ಶ್ರೀ ಕೇಶವಮೂರ್ತಿ | ಇದೇ ವಿಷಯವಾಗಿ ಮತ್ತೊಮ್ಮೆ ಶ್ರೀ ಚಂದ್ರಮೋಹನ್‌ರವರು ಮಾತನಾಡಿ ಈಗಾಗಲೆ ವಾಟರ್‌ಮ್ಯಾನ್ ರವರನ್ನು ಬದಲಾಯಿಸಿರುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 3 | ಶ್ರೀ ಚಂದ್ರಮೋಹನ್‌ರವರು ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸತೀಶ್ ಎಂಬ ವಾಟರ್‌ಮ್ಯಾನ್ ರವರನ್ನು ರಸ್ತೆಯ ಜನರು ಅವಾಚ್ಯ ಶಬ್ಧಗಳಿಂದ ನಿಂದಿಸಿರುವುದಾಗಿ ತಿಳಿಸಿದರು. | ಶ್ರೀ ಚಂದ್ರಮೋಹನ್ | ಈ ವಿಷಯಕ್ಕೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿರವರು ಮಾತನಾಡಿ ಯಾವುದೇ ತರಹದ ಅಧಿಕಾರಿಗಳನ್ನು ಈ ರೀತಿ ನಿಂದಿಸಬಾರದೆಂದು ತಿಳಿ ಹೇಳಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |
| 4 | ಬೋರ್‌ವೆಲ್‌ಗಳ ಅವಶ್ಯಕತೆಯ ಬಗ್ಗೆ ದೂರಿದರು. | ಸಾರ್ವಜನಿಕರು | ಇದರ ಅವಶ್ಯಕತೆಯನ್ನು ಸಂಬಂಧಪಟ್ಟವರ ಜೊತೆ ಮಾತನಾಡಿ ಇನ್ನೂ 10–15 ದಿನಗಳಲ್ಲಿ ಏರ್ಪಾಡು ಮಾಡುವುದಾಗಿ ತಿಳಿಸಿರುತ್ತಾರೆ | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |
| 5 | ಪೈಪ್‌ಲೈನ್ ರಸ್ತೆ ಮತ್ತು ಅಬ್ಬಿಗೆರೆ ಮೇಜರ್ ರೋಡ್ ರಸ್ತೆಗಳು ಓಡಾಡಲು ಸಾಧ್ಯವಾಗುತ್ತಿಲ್ಲವೆಂದು ದೂರಿದರು. | ಶ್ರೀ ವಿನೋದ್ | ಈ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಕುಡಿಯುವ ನೀರಿನ ಪೈಪ್‌ಗಳನ್ನು ಅಳವಡಿಸುತ್ತಿರುವುದರಿಂದ ಮುಂದಿನ ದಿನಗಳಲ್ಲಿ ರಸ್ತೆಗಳನ್ನು ಸರಿಪಡಿಸಲಾಗುವುದೆಂದು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |
| 6 | ಉದ್ಯಾನವನಗಳು ಮತ್ತು ಕೆಲವು ರಸ್ತೆಗಳಿಗೆ ಪೋಲೀಸ್ ಬೀಟ್ ಹಾಕಿಸಿಕೊಡಬೇಕೆಂದು ಪೋಲೀಸ್ ಸಬ್‌ಇನ್ಸ್‌ಪೆಕ್ಟರ್‌ರವರನ್ನು ಕೇಳಿದರು. ಗೇಟ್‌ಪಾಳ್ಯ ಮತ್ತು ಇನ್ನೆರಡು ರಸ್ತೆಗಳಲ್ಲಿ ಗಾಂಜಾ ಮತ್ತು ಇಸ್ಪಿಟ್ ಆಡುತ್ತಿರುವುದಾಗಿ ಸಾರ್ವಜನಿಕರು ದೂರಿದರು. | ಸಾರ್ವಜನಿಕರು | ಇದರ ಬಗ್ಗೆ ಸರಿಯಾದ ವಿಳಾಸ ಮತ್ತು ಸಮಯದಲ್ಲಿ ಕರೆ ಮಾಡಿದಾಗ ಕೂಡಲೇ ಬಂದು ಕ್ರಮತೆಗೆದುಕೊಳ್ಳುವುದಾಗಿ ತಿಳಿಸಿದರು, | ಪೋಲೀಸ್ ಸಬ್‌ಇನ್ಸ್‌ಪೆಕ್ಟರ್, ಗಂಗಮ್ಮನಗುಡಿ ಪೋಲೀಸ್ ಠಾಣೆ |

Scanned by CamScanner

| | | | | |
|---|---|---|---|---|
| 7 | ಮುಂದಿನ ಸಭೆಗೆ ಶ್ರೀ ಮಂಜುನಾಥ್, ಎ.ಇ., ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರನ್ನು ಸಭೆಗೆ ಕರೆಸಬೇಕೆಂದು ಕೋರಿದರು. | ಸಾರ್ವಜನಿಕರು | ಕರೆಸುವುದಾಗಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |
| 8 | ವಿನಾಯಕ ಲೇಔಟ್‌ನಲ್ಲಿ ಕಸದ ಲಾರಿಗಳಿಂದ ಹೆಚ್ಚಿನ ಕಸವು ರಸ್ತೆಗೆ ಬೀಳುತ್ತಿರುವುದಾಗಿ ದೂರು ನೀಡಲಾಯಿತು. | ಶ್ರೀಮತಿ ನಾಗವೇಣಿ | ಈ ವಿಷಯವಾಗಿ ಶ್ರೀ ಮಂಜುನಾಥ್, ಹೆಲ್ತ್ ಇನ್ಸ್‌ಪೆಕ್ಟರ್ ರವರಿಗೆ ಕ್ರಮ ತೆಗೆದುಕೊಳ್ಳಲು ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಎಸ್.ಡಬ್ಲ್ಯೂ.ಎಂ ಉಪವಿಭಾಗ |
| 9 | ಚಿಕ್ಕಸಂದ್ರ ಸ್ಮಶಾನದ ಹತ್ತಿರ ಆಂಜನಾದ್ರಿ ಲೇಔಟ್ ಸರ್ಕಲ್, ಮುಖ್ಯರಸ್ತೆಯ ದ್ವಾರದ ಬಳಿ, ಸಿಸಿ ಕ್ಯಾಮರಗಳನ್ನು ಅಳವಡಿಸಿಕೊಡಬೇಕೆಂದು ಕೋರಿದರು. | ಶ್ರೀ ವೆಂಕಿ | ಈ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮತೆಗೆದು ಕೊಳ್ಳುವುದಾಗಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |
| 10 | ಶ್ರೀ ಸಿದ್ದರೆಡ್ಡಿರವರು ಕೋವಿಡ್ 3ನೇ ಅಲೆಯ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆ ನೀಡಿದರು. | | | |

ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ.

ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.

1. ಮನೆ ಮನೆಗಳಿಂದ ಹಾಗೂ ವಾಣಿಜ್ಯ ಸಂಕೀರ್ಣಗಳಿಂದ ಹಸಿಕಸ, ಒಣಕಸ ಮತ್ತು ಸ್ಯಾನಿಟರಿ ತ್ಯಾಜ್ಯಗಳನ್ನು ಬೇರ್ಪಡಿಸಿ ತೆಗದುಕೊಳ್ಳುವುದನ್ನು ಪರಿಶೀಲಿಸುವುದು.
2. ತ್ಯಾಜ್ಯ ವಿಂಗಡಿಸದೆ ನೀಡುವುದು ಕಂಡು ಬಂದರೆ ಅಂತಹವರಿಗೆ ದಂಡ ವಿಧಿಸಲು ಸಂಬಂಧಪಟ್ಟ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡುವುದು.

2) ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸುವ ವಿಚಾರ.

1. ಸುಮಾರು 1031 ರಸ್ತೆಗಳಿದ್ದು, ಇದರಲ್ಲಿ ಸುಮಾರು 820 ರಸ್ತೆಗಳನ್ನು ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಅಗೆಯಲಾಗಿದ್ದು, ಬಾಕಿ ಇರುವ 211 ರಸ್ತೆಗಳಲ್ಲಿ ಪಾಟ್‌ಹೋಲ್‌ಗಳನ್ನು ಮುಚ್ಚಲು ಅನುವು ಮಾಡಿಕೊಳ್ಳಲಾಗಿರುತ್ತದೆ.
2. ಸದರಿ ವಾರ್ಡ್‌ನ ಮುಖ್ಯರಸ್ತೆಗಳನ್ನು ತುರ್ತಾಗಿ ಸಾರ್ವಜನಿಕರು ಸುಗಮವಾಗಿ ಸಂಚಾರಿಸುವಂತೆ ಕ್ರಮವಹಿಸಲು ವಾರ್ಡ್‌ನ ಎಲ್ಲಾ ಅನುದಾನಗಳನ್ನು ಉಪಯೋಗಿಸಿಕೊಂಡು ಕ್ರಮಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

3) ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿಗಳಾದ ಕುಡಿಯುವ ನೀರು ಮತ್ತು ಒಳಚರಂಡಿಯ ಬಗ್ಗೆ ಚರ್ಚಿಸುವ ವಿಚಾರ.

Scanned by CamScanner

1. ಸದರಿ ವಾರ್ಡ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯ ಕುಡಿಯುವ ನೀರು ಕಾಮಗಾರಿಯು ಪೂರ್ಣವಾಗಿ ಮುಗಿದಿದ್ದು, ವಾರ್ಡ್‌ನ ಕೆಲವು ಭಾಗಗಳಲ್ಲಿ ಮನೆಗಳ ಸಂಪರ್ಕ ಬಾಕಿ ಇರುತ್ತದೆ.
2. ಸದರಿ ವಾರ್ಡ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯ ಒಳಚರಂಡಿ ಕಾಮಗಾರಿಯು ಸುಮಾರು 85% ಮುಗಿದಿದ್ದು, ವಾರ್ಡ್‌ನ ಕೆಲವು ಭಾಗಗಳಲ್ಲಿ ಒಳಚರಂಡಿಯ ಮುಖ್ಯ ಪೈಪ್‌ಲೈನ್‌ಗಳನ್ನು ಹಾಕಬೇಕಾಗಿದ್ದು, ಇನ್ನೂ ಬಾಕಿ ಇರುವ ಮ್ಯಾನ್‌ಹೋಲ್‌ಗಳನ್ನು ಅಳವಡಿಸಬೇಕಾಗಿರುತ್ತದೆ ಹಾಗೂ ರಿಸಿವಿಂಗ್ ಚೇಂಬರ್‌ಗಳನ್ನು ಅಳವಡಿಸಿ ಮನೆಗಳಿಗೆ ಸಂಪರ್ಕ ನೀಡುವುದು ಬಾಕಿ ಇರುತ್ತದೆ.

4) ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ದಿನಾಂಕ: 23.08.2021 ರಂದು ಚರ್ಚಿಸಿರುವ ವಿಚಾರಗಳು.

| ಕ್ರ ಸಂ | ವಿಷಯ ಸೂಚಿ | ಚರ್ಚಿಸಿದ ವ್ಯಕ್ತಿಯ ಹೆಸರು ಮತ್ತು ದೂರವಾಣಿ ಸಂಖ್ಯೆ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|---|
| 1 | ಶ್ರೀ ಕೇಶವಮೂರ್ತಿ ರವರು ಮುಂದಿನ ಸಭೆಗೆ ವಾಟರ್‌ಮ್ಯಾನ್‌ಗಳನ್ನು ಕರೆಸಿ ವಿಚಾರಣೆ ಮಾಡಲು ಸಲಹೆ ನೀಡಿದರು. | ಶ್ರೀ ಕೇಶವಮೂರ್ತಿ | ವಾಟರ್‌ಮ್ಯಾನ್‌ಗಳನ್ನು ಕರೆಸುವುದಾಗಿ ಸಭೆಯಲ್ಲಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |
| 2 | ಆರ್.ಆರ್. ಕಾಲೇಜ್ ಹತ್ತಿರ ರಸ್ತೆಯ ಗುಂಡಿಗಳನ್ನು ಮುಚ್ಚಲು ಎಲ್&ಟಿ ಕಡೆಯವರಾದ ಶ್ರೀ ಕುಮಾರನ್ ರವರಿಗೆ ತಿಳಿಸಲಾಯಿತು. | ಶ್ರೀ ಸೋಮಶೇಖರ್ | ಅದರಂತೆ, ಶ್ರೀ ಕುಮಾರನ್ ರವರಿಗೆ ವಿಷಯ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |
| 3 | ರಾಜಕಾಲುವೆಗಳ ತೊಂದರೆಗಳನ್ನು ನಿವಾರಿಸಿ ಕೊಡಲು ಕೇಳಲಾಯಿತು. | ಶ್ರೀ ಸೋಮಶೇಖರ್ | ಇದರ ಬಗ್ಗೆ ಎಸ್.ಡಬ್ಲ್ಯೂ.ಡಿ. ರವರಿಗೆ ವಿಷಯ ತಿಳಿಸುವುದಾಗಿ ಹೇಳಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |
| 4 | ಕೆ.ಜಿ.ಹಳ್ಳಿ ಮತ್ತು ಕಲಾನಗರಗಳಲ್ಲಿ ರಸ್ತೆಗಳ ಅಕ್ಕಪಕ್ಕಗಳಲ್ಲಿ ಕಸವನ್ನು ತೆಗೆಯುತ್ತಿಲ್ಲವೆಂದು ಹೇಳಿದರು. | ಶ್ರೀ ದಯಾಳ್ | ಈ ವಿಷಯದ ಬಗ್ಗೆ ಶ್ರೀ ಸುರೇಶ್ ರವರಿಗೆ ಈ ತೊಂದರೆಯನ್ನು ಬಗೆಹರಿಸಲು ಹೇಳಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಎಸ್.ಡಬ್ಲ್ಯೂ.ಎಂ ಉಪವಿಭಾಗ |
| 5 | ಅಬ್ಬಿಗೆರೆ ಊರಿನ ರಸ್ತೆಗಳು ತುಂಬಾ ಹಾಳಾಗಿರುವುದಾಗಿ ದೂರು ನೀಡಲಾಯಿತು | ಸಾರ್ವಜನಿಕರು | ಈ ಬಗ್ಗೆ 110 ಹಳ್ಳಿಗಳ ಟೆಂಡರ್ ಪ್ರಕ್ರಿಯೆ ನಡೆಯುತ್ತಿರುವುದಾಗಿ ಇನ್ನೂ ಎರಡು ತಿಂಗಳಲ್ಲಿ ಕಾಮಗಾರಿಗಳು ಪ್ರಾರಂಭಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |
| 6 | ಡಬ್ಲ್ಯೂ.ಡಬ್ಲ್ಯೂ.ಎಂ. ನ ಅಧಿಕಾರಿಗಳನ್ನು ಸಭೆಗೆ ಕರೆಸಬೇಕೆಂದು ಕೇಳಿದರು | ಸಾರ್ವಜನಿಕರು | ಇದರ ಬಗ್ಗೆ ಡಬ್ಲ್ಯೂ.ಡಬ್ಲ್ಯೂ.ಎಂ. ರವರಿಗೆ ವಿಷಯ ತಿಳಿಸುವುದಾಗಿ ಹೇಳಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |

Scanned by CamScanner

| | | | | |
|---|---|---|---|---|
| 7 | ವಿನಾಯಕ ಲೇಔಟ್‌ನಲ್ಲಿ ಸಿಸಿಟಿವಿ ಕ್ಯಾಮೆರಾಗಳಿಗೆ ಮರಗಳು ಅಡ್ಡವಿರುವುದಾಗಿ ಇದನ್ನು ತೆಗೆಸಬೇಕೆಂದು ಕೋರಿದರು. | ಶ್ರೀಮತಿ ನಾಗವೇಣಿ | ಈ ವಿಷಯದ ಬಗ್ಗೆ ಅರಣ್ಯ ಇಲಾಖೆಯವರೊಂದಿಗೆ ಚರ್ಚಿಸಲಾಗಿ ತೆರವುಗೊಳಿಸುವುದಾಗಿ ತಿಳಿಸಿದರು. | ಅರಣ್ಯ ಅಧಿಕಾರಿಗಳು ಅರಣ್ಯ ವಿಭಾಗ |
| 8 | ಗೇಟ್ ಪಾಳ್ಯದಲ್ಲಿ ಸ್ಯಾನಿಟರಿ ಪೈಪ್‌ಗಳನ್ನು ಮೋರಿಗೆ ಬಿಟ್ಟಿರುವುದಾಗಿ ದೂರು ನೀಡಲಾಯಿತು, | ಸಾರ್ವಜನಿಕರು | ಇದನ್ನು ಸರಿಪಡಿಸಬೇಕೆಂದು ಶ್ರೀ ಕುಮಾರನ್ ರವರಿಗೆ ತಿಳಿಸಿ ಮುಂದಿನ ಸಭೆಯೊಳಗೆ ಮುಗಿಸಬೇಕೆಂದು ಹೇಳಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |
| 9 | ಗೇಟ್‌ಪಾಳ್ಯ ರಾಜಕಾಲುವೆಗೆ 400 ಮೀಟರ್ ಗೋಡೆ ಕಟ್ಟಬೇಕೆಂದು ಕೇಳಲಾಯಿತು ಹಾಗೂ ಸಿಲ್ಟ್ ತೆಗೆಸಬೇಕೆಂದು ದೂರು ನೀಡಿದರು. | ಸಾರ್ವಜನಿಕರು | ಈ ವಿಷಯವಾಗಿ ಶ್ರೀ ಇಂದ್ರಕುಮಾರ್, ಕಾರ್ಯಪಾಲಕ ಅಭಿಯಂತರರು, ರವರಿಗೆ ತಿಳಿಸುವುದಾಗಿ ಹೇಳಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಎಸ್.ಡಬ್ಲ್ಯೂಡಿ ಉಪವಿಭಾಗ |
| 10 | ಅಬ್ಬಿಗೆರೆ ವಾರ್ಡ್ ಆಫೀಸ್‌ನ ಮುಂಭಾಗದಲ್ಲಿ ಲಯನ್ಸ್ ಕ್ಲಬ್ ರವರು ಬಟ್ಟೆ ಶೇಖರಣೆ ಮಾಡಲು ಇರುವ ಜಾಗದಲ್ಲಿ ಬಟ್ಟೆಗಳು ಕೆಳಗೆ ಬಿದ್ದು, ವಾಸನೆ ಬರುತ್ತಿರುವುದಾಗಿ ದೂರನ್ನು ನೀಡಲಾಯಿತು. | ಶ್ರೀಮತಿ ನಾಗವೇಣಿ | ಇದನ್ನು ತೆರವುಗೊಳಿಸುವುದಾಗಿ ಹೇಳಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು. ಶೆಟ್ಟಿಹಳ್ಳಿ ಉಪವಿಭಾಗ |
| 11 | ಮೇದರಹಳ್ಳಿಯ ವಿನಾಯಕ ಲೇಔಟ್‌ನಲ್ಲಿ ಕಳ್ಳತನಗಳು ಆಗುತ್ತಿರುವುದಾಗಿ ದೂರಲಾಯಿತು | ಶ್ರೀಮತಿ ನಾಗವೇಣಿ | ಈ ವಿಷಯದ ಬಗ್ಗೆ ವಾರ್ಡ್ ಕಮಿಟಿ ಅಧ್ಯಕ್ಷರು, ಸೋಲದೇವನಹಳ್ಳಿ ಇನ್ಸ್‌ಪೆಕ್ಟರ್‌ರವರೊಂದಿಗೆ ಚರ್ಚಿಸಿ ಬೀಟ್ ಪೋಲೀಸ್ ರವರನ್ನು ನೇಮಿಸಬೇಕೆಂದು ತಿಳಿಸಿದರು. | ಪೋಲೀಸ್ ಇನ್ಸ್‌ಪೆಕ್ಟರ್ ಸೋಲದೇವನಹಳ್ಳಿ ಪೋಲೀಸ್ ಠಾಣೆ |

<u>ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು</u>.

ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| Kseecj.nn | Sd/- |
| ಸದಸ್ಯ ಕಾರ್ಯದರ್ಶಿ | ವಾರ್ಡ್ ಸಮಿತಿ ಅಧ್ಯಕ್ಷರು |
| ಹಾಗೂ ಸಹಾಯಕ ಅಭಿಯಂತರರು | ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ |
| ವಾರ್ಡ್ ನಂ. 12 ಶೆಟ್ಟಿಹಳ್ಳಿ | ವಾರ್ಡ್ ನಂ. 12 ಶೆಟ್ಟಿಹಳ್ಳಿ |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

Scanned by CamScanner

:ಪ್ರತಿಯನ್ನು:

**ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಮಾಹಿತಿಗಾಗಿ.**

1) ಶ್ರೀ ರವಿಕುಮಾರ್, ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿಗಳು, ರವರ ಮಾಹಿತಿಗಾಗಿ ಕಳುಹಿಸಿದೆ.
2) ಶ್ರೀ ಕೆ.ಸಿ. ವೆಂಕಟೇಶ್ (ದೇವೇಗೌಡ್ರು), ಕೆ.ಜಿ.ಹಳ್ಳಿ, ರವರ ಮಾಹಿತಿಗಾಗಿ ಕಳುಹಿಸಿದೆ
3) ಶ್ರೀ ರಾಮಕೃಷ್ಣೇಗೌಡ್ರು , ಎ.ಜಿ.ಬಿ. ಬಡವಾಣೆ, ರವರ ಮಾಹಿತಿಗಾಗಿ ಕಳುಹಿಸಿದೆ
4) ಶ್ರೀ ಕೃಷ್ಣಪ್ಪ, ಅಬ್ಬಿಗೆರೆ, ರವರ ಮಾಹಿತಿಗಾಗಿ ಕಳುಹಿಸಿದೆ
5) ಶ್ರೀ ಕೆಂಪೋಬಳಯ್ಯ, ಶೆಟ್ಟಿಹಳ್ಳಿ, ರವರ ಮಾಹಿತಿಗಾಗಿ ಕಳುಹಿಸಿದೆ
6) ಶ್ರೀಮತಿ ಲಲಿತಮ್ಮ, ಬಾಬಣ್ಣ ಲೇಔಟ್, ರವರ ಮಾಹಿತಿಗಾಗಿ ಕಳುಹಿಸಿದೆ
7) ಶ್ರೀ ರಾಜಣ್ಣ (ಗ್ಯಾಸ್), ಚಿಕ್ಕಸಂದ್ರ, ರವರ ಮಾಹಿತಿಗಾಗಿ ಕಳುಹಿಸಿದೆ
8) ಶ್ರೀಮತಿ ನಾಗವೇಣಿ, ವಿನಾಯಕ ಲೇಔಟ್, ರವರ ಮಾಹಿತಿಗಾಗಿ ಕಳುಹಿಸಿದೆ

**ಅಧಿಕಾರಿಗಳ ಮಾಹಿತಿಗಾಗಿ**

1) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
2) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಉಪ ನಿಯಂತ್ರಕರು (ಹಣಕಾಸು) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಶೆಟ್ಟಿಹಳ್ಳಿ)ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಂದಾಯ ಅಧಿಕಾರಿ (ಶೆಟ್ಟಿಹಳ್ಳಿ)ರವರ ಮಾಹಿತಿಗಾಗಿ ಕಳುಹಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ರವರ ಮಾಹಿತಿಗಾಗಿ ಕಳುಹಿಸಿದೆ
8) ಸಹಾಯಕ ಕಾರ್ಯಪಾಲಕ ಅಭಿಯಂತರರು (SWD) ರವರ ಮಾಹಿತಿಗಾಗಿ ಕಳುಹಿಸಿದೆ
9) ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB)ರವರ ಮಾಹಿತಿಗಾಗಿ ಕಳುಹಿಸಿದೆ
10) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಮಾಹಿತಿಗಾಗಿ ಕಳುಹಿಸಿದೆ
11) ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರ ಮಾಹಿತಿಗಾಗಿ ಕಳುಹಿಸಿದೆ
12) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ/ಕೆಪಿಟಿಸಿಎಲ್ ಸೋಲದೇವನಹಳ್ಳಿ/ಜಾಲಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ
13) ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಎನ್-5 ಪೀಣ್ಯ ರವರ ಮಾಹಿತಿಗಾಗಿ ಕಳುಹಿಸಿದೆ
14) ಉಪ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ರವರ ಮಾಹಿತಿಗಾಗಿ ಕಳುಹಿಸಿದೆ.
15) ವಲಯ ಅರಣ್ಯಾಧಿಕಾರಿ ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ
16) ಸಹಾಯಕ ನಿರ್ದೇಶಕರು (ನಗರ ಯೋಜನೆ) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ
17) ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ
18) ಸಹಾಯಕ ನಿರ್ದೇಶಕರು (ಪಶುಪಾಲನೆ) ರವರ ಮಾಹಿತಿಗಾಗಿ ಕಳುಹಿಸಿದೆ
19) ಕಲ್ಯಾಣಾಧಿಕಾರಿ (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಕಳುಹಿಸಿದೆ
20) ತೋಟಗಾರಿಕೆ ಅಧೀಕ್ಷಕರು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಕಳುಹಿಸಿದೆ
21) ಆರೋಗ್ಯಾಧಿಕಾರಿ/ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.12 ರವರ ಮಾಹಿತಿಗಾಗಿ ಕಳುಹಿಸಿದೆ
22) ಪೋಲೀಸ್ ಇನ್ಸ್‌ಪೆಕ್ಟರ್ ಗಂಗಮ್ಮನಗುಡಿ/ಬಾಗಲಗುಂಟೆ/ಸೋಲದೇವನಹಳ್ಳಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಕಳುಹಿಸಿದೆ
23) ಪೋಲೀಸ್ ಸಬ್ ಇನ್ಸ್‌ಪೆಕ್ಟರ್ (ಸಂಚಾರಿ) ಜಾಲಹಳ್ಳಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಕಳುಹಿಸಿದೆ
24) ಕಛೇರಿ ಪ್ರತಿ.

Scanned by CamScanner